ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರು ಈಗ ಇಲ್ಲಿ ಅನೇಕ ವಿಚಾರಗಳು ಪ್ರಸ್ತಾಪಿಸಲ್ಪಡುತ್ತಿವೆ ಅವುಗಳಲ್ಲಿ ಅವರ ಸಲಹೆ ಬಹಳ ಮುಖ್ಯವಾಗಿರುವುದರಿಂದ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯಮಾಡಿ ಅವರು ತಮ್ಮ ಆಸನಕ್ಕೆ ಹೋದರೆ ಒಳ್ಳೆಯದು ನಂತರ ನಾನು ಅವರನ್ನು ಕರೆಸಿ ಮಾತನಾಡಿಸುತ್ತೇನೆ

ಶ್ರೀ ಕೆ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೇ, ನಾನು ತಮಗೆ 16ನೇ ತಾರೀಖಿನಂದೇ ಒಂದು ವಿಚಾರದ ಬಗ್ಗೆ ಪತ್ರವನ್ನು ಕಳುಹಿಸಿ ಕೊಟ್ಟಿದ್ದೆ ಪಟ್ಟಿಯಲ್ಲಿ ನನ್ನ ಹೆಸರಿದೆ ತಾವು ಬೇರೆಯವರಿಗೆಲ್ಲಾ ಅವಕಾಶವನ್ನು ಕೊಡುತ್ತಿದ್ದೀರಿ ಇದುವರೆಗೂ ನನ್ನ ಹೆಸರನ್ನು ಕರೆದಿಲ್ಲ ತಾವು ಕರೆಯುತ್ತೀರಿ ಎಂದು ನಾಣು ಕಾಯುತ್ತಿದ್ದೇನೆ ಆದರೆ ಬೇರೆಯವರು ಯಾರ್ಯಾರು ಬೇಕೋ ಅವರು ಎದ್ದು ಅಹರಷ್ಟಕ್ಕೆ ಅವರೇ ಹೇಳುತ್ತಿದ್ದಾರೆ

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಒಬ್ಬೊಬ್ಬರಾಗಿ ಕರೆಯುತ್ತೇನೆ ತಮಗೂ ಅವಕಾಶ ಮಾಡಿಕೊಡುತ್ತೇವೆ

ವಿಷಯ ಶ್ರೀ ವಾಟಾಳ್ ನಾಗರಾಜ್‌ರವರು ಧರಣಿಯನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಹೋಗಲು ಮನವಿ

ಶ್ರೀ ಎಂ ಪಿ ಪ್ರಕಾಶ್ ವಾಟಾಳ್ ನಾಗರಾಜ್‌ರವರು ಎತ್ತಿರುವಂಥ ಪ್ರಶ್ನೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರ ಜೊತೆ ಮಾತನಾಡಿ, ಅವರ ಪ್ರಶ್ನೆಗೆ ಸಮಾಧಾನಕರವಾಗಿರತಕ್ಕಂಥ ಉತ್ತರವನ್ನು ಸರ್ಕಾರದಿಂದ ಕೊಡಿಸುತ್ತೇನೆ, ಅವರ ಕೊಣೆಗೆ ಕರೆಸಿ ಮಾತನಾಡುತ್ತೇನೆ ಹಿರಿಯ ಸದಸ್ಯರುಗಳು ಅನೇಕ ವಿಚಾರಗಳನ್ನು ಎತ್ತಿದ್ದಾರೆ ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಬಂದು ಸಹಕರಿಸಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರೆ, ಇಲ್ಲೇ ಉತ್ತರ ಕೊಡಿಸುತ್ತೇನೆ, ಅಕಸ್ಮಾತ್ ಸಮಯದ ಅಭಾವವಿತ್ತು ಎಂದರೆ, ನಿಮ್ಮನ್ನು ಅವರ ಕೊಣೆಗೆ ಕರೆಸಿ ವಿಚಾರಗಳನ್ನು ಮಾತನಾಡಿಸುತ್ತೇನೆ ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬರಬೇಕು

ಅಧ್ಯಕ್ಷರು ದಯಮಾಡಿ, ತಾವು ತಮ್ಮ ಸ್ಥಾನಕ್ಕೆ ಹಿಂತಿರುಗಿ

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಅಧ್ಯಕ್ಷರು ಈಗ ಎಂ ಪಿ ಕುಮಾರಸ್ವಾಮಿಯವರು ತಾವು ಮಾತನಾಡಿ

ಎ) ವಿಷಯ ಜಿಲ್ಲಾ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಬೇಲೂರು) ಕಳೆದ ಸರ್ಕಾರ, ಬೇಲೂರು ಘೋಷಣೆಯಂತೆ, ಕುಡಿಯುವ ನೀರಿನ ಕಾಮಗಾರಿಯನ್ನು ಗ್ರಾಮ ಪಂಚಾಯಿತಿಗೆ ವರ್ಗಾಯಿಸಿ ಆದೇಶ ಹೊರಡಿಸಿತ್ತು ಆದರೆ ಇವತ್ತಿಗೂ ಕೂಡ ಗ್ರಾಮ ಪಂಚಾಯಿತಿಗಳಿಗೆ ಹಣ ಬಂದಿಲ್ಲ ಜಿಲ್ಲಾ ಪಂಚಾಯಿತಿಗಳಲ್ಲಿ ಕಳೆದ 6–7 ತಿಂಗಳುಗಳಿಂದ ಯಾವುದೇ ಕುಡಿಯುವ ನೀರಿನ ಕಾಮಗಾರಿ ಆಗುತ್ತಿಲ್ಲ ಇದು ಸರ್ಕಾರದ ನೀತಿ ಇದು ನಮಗೆ ತಪ್ಪಾಗಿ ಕಾಣುತ್ತಿದೆ ಶಾಸಕರಾದ, ನವು, ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯನ್ನಾಗಲೀ ಅಧವಾ ಅಧ್ಯಕ್ಷರನ್ನಾಗಲೀ ಕುಡಿಯುವ ನೀರನ್ನು ಕೇಳಲು ನಮಗೆ ಮುಜುಗರವಾಗುತ್ತದೆ ಆದ್ದರಿಂದ, ಆ ಕಾಮಗಾರಿಯನ್ನು ಜಿಲ್ಲಾ ಪಂಚಾಯಿತಿಯವರು ಅನುಷ್ಠಾನಗೊಳಿಸಿದರೆ ಒಳ್ಳೆಯದು ಆಗ ನಮ್ಮ ಘನತೆಯೂ ಸ್ವಲ್ಪ

ಉತ್ತಮವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ ಅದು ಗ್ರಾಮ ಪಂಚಾಯಿತಿಯಲ್ಲಿ ಅನುಷ್ಟಾನಗೊಳ್ಳುವ ಬದಲು, ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನವಾದರೆ,ನಮ್ಮ ಘನತೆ ಗೌರವಗಳಿಗೆ ಸ್ವಲ್ಪ ತೃಪ್ತಿ ತರುತ್ತದೆ ಎನ್ನುವುದು ನನ್ನ ಅಭಿಪ್ರಾಯ ಮತ್ತು ಈ ಕಾಮಗಾರಿ ಬೇಗ ಚಾಲುವಾಗುವಂತೆ ಸರ್ಕಾರ ಗಮನ ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಅಧಿಕಾರ ವಿಕೇಂದ್ರೀಕರಣಕ್ಕೆ ಬದ್ಧವಾಗಿರತಕ್ಕಂಥ ನಾವು, ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ ಪ್ರಕಾರ ಏನು ಶೆಡ್ಯೂಲ್ ಇದೆ, ಆ ಶೆಡ್ಯೂಲಿನ ಪ್ರಕಾರ ಗ್ರಾಮ ಪಂಚಾಯಿತಿಗಳು ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡಬೇಕಾಗುತ್ತದೆ ತಮ್ಮ ಪಕ್ಷದ ಶಾಸಕರೇ ಆದಂಥ ಮಾನ್ಯ ಜ್ಞಾನೇಂದ್ರರವರನ್ನು ತಾವು ಕೇಳಬಹುದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಳೆದ 10–12 ವರ್ಷಗಳಿಂದಲೂ ಕೂಡ ಗ್ರಾಮ ಪಂಚಾಯಿತಿಯವರೇ ಸಂಪೂರ್ಣವಾಗಿ ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡುತ್ತಿದ್ದಾರೆ ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು ಇದ್ದಂಥ ಸಂದರ್ಭದಲ್ಲಿ ಟ್ರೈಸಮ್ ಸ್ಕೀಮಿನಲ್ಲಿಯಾಗಲೀ, ಅಥವಾ ಉದ್ಯೋಗ ತರಬೇತಿಗೆ ಸಂಬಂಧಪಟ್ಟಂಥ ವಿಚಾರಗಳಲ್ಲಿ ಆಯಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಯುವಕರನ್ನು, ಈ ಕೊಳವೆ ಬಾವಿಗಳ ರಿಪೇರಿ ಮುಂತಾದ ವಿಚಾರಗಳಲ್ಲಿ ತರಬೇತಿಯನ್ನು ಕೊಟ್ಟು, ಅಲ್ಲಿ ಅವರು 2–3 ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳನ್ನು ಸ್ಟ್ಯಾಂಡ್–ಬೈ ಆಗಿ ಇಟ್ಟುಕೊಳ್ಳುತಕ್ಕಂಥಾದ್ದು, ಅದರ ಜೊತೆಗೆ ಬೇಕಾದಂಥ ಸಂದರ್ಭದಲ್ಲಿ ಅವರು ಎರಡು ಟೂಲ್ ಕಿಟ್‌ಗಳನ್ನಿಟ್ಟುಕೊಂಡು ರಿಪೇರಿ ಮಾಡಬೇಕು ಎನ್ನುವ ವಿಚಾರಗಳೂ ಕೂಡ ಪ್ರಸ್ತಾಪಿಸಲ್ಪಟ್ಟಿದ್ದವು. ಆದರೆ ಈಗ ತಾವು ಹೇಳಿದಂತೆ, ಕುಡಿಯುವ ನೀರಿನ ವಿಚಾರಕ್ಕೆ ಬಂದರೆ, ಗ್ರಾಮ ಪಂಚಾಯಿತಿಗಳಲ್ಲಿ ಸಂಪೂರ್ಣವಾದಂಥ ಸಿಬ್ಬಂದಿಯಿಲ್ಲ ಹಾಗೂ ಅಲ್ಲಿ ಬೇರೆಬೇರೆ ಕಾರಣಗಳಿಂದಾಗಿ ದುರುಪಯೋಗವಾಗಿರತಕ್ಕಂಥ ಸಂದರ್ಭದಲ್ಲಿ ಕೂಡ ಇವೆ ಈ ಕಾರಣದಿಂದಾಗಿ, ಈಗಾಗಲೇ ಜಿಲ್ಲಾಪಂಚಾಯಿತಿಯವರು ತಾತ್ಕಾಲಿಕವಾಗಿ ಕೆಲವು ಕಡೆಗಳಿಗೆ ಹೋಗುತ್ತಿದ್ದಾರೆ ಆದರೆ ಅದರ ನಿರ್ವಹಣಾ ವೆಚ್ಚಕ್ಕೆ ಬೇರೆ ಒಂದು ಲೆಕ್ಕ ಶೀರ್ಷಿಕೆ ಇದೆ ಅದರಿಂದಾಗಿ ಸ್ವಲ್ಪ ತೊಂದರೆಯಾಗಿದೆ ಅಧಿಕಾರ ವಿಕೇಂದ್ರೀಕರಣಕ್ಕೆ ಬದ್ಧರಾಗಿರುವಂಥ ನಾವು, ಪ್ರಾರಂಭದ ಹಂತದಲ್ಲಿ ಸ್ವಲ್ಪ ತೊಂದರೆಯಾಗಿದ್ದರೂ ಕೂಡ ನಾವು ಅಲ್ಲಿ ನಾಯಕತ್ವದ ತರಬೇರಿಯನ್ನು ಮಾಡಬೇಕು ಆದ್ದರಿಂದ, ಏಕೀಕೃತ ಅಧಿಕಾರಿವನ್ನು ವಾಪಸ್ಸು ತೆಗೆದುಕೊಳ್ಳುದೆ, ಅಲ್ಲಿಯ ವಾಸ್ತವ ಸಂಗತಿಗಳಿಗೆ ಅನುಗುಣವಾದಂಥ ರೀತಿಯಲ್ಲಿ ಜಿಲ್ಲಾ ಪಂಚಾಯಿತಿಯವರೇ ಕಾರ್ಯನಿರ್ವಹಣೆ ಮಾಡಬೇಕು ಎನ್ನುವ ವಿಚಾರವನ್ನು ಎಲ್ಲಾ ಮಾನ್ಯ ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಈಗ ಇದರಲ್ಲಿ ಸ್ವಲ್ಪಮಟ್ಟಿನ ತೊಂದರೆಯಿದೆ ಈ ಖಾತೆಗೆ ಪ್ರತ್ಯೇಕ ಮಂತ್ರಿಗಳು ಬಂದಂಥ ಸಂದರ್ಭದಲ್ಲಿ ಅದಕ್ಕೆ ಹೆಚ್ಚು ಗಮನವನ್ನು ಕೊಡುತ್ತಾರೆ ತಾವು ಹೇಳಿದ ಮಾತಿನ ಹಿನ್ನಲೆಯಲ್ಲಿ, ಜಿಲ್ಲಾ ಪಂಚಾಯಿತಿಯವರು ಸರಿಯಾದಂಥ ವಾಸ್ತವ ಸಂಗತಿಗಳ ಆಧಾರದ ಮೇಲೆ ಮಾಡಬೇಕು ಎನ್ನುವ ಸೂಚನೆಯನ್ನು ನಾವು ಕಳುಹಿಸಿಕೊಡುತ್ತೇವೆ

ಐ) ಬಾಗಲಕೋಟೆಯ ಮುಳೂಗಡೆ ಯಾದವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಅಧ್ಯಕ್ಷರೇ, ಬಾಗಲಕೋಟೆಯು ಬಹಳಷ್ಟು ವರ್ಷಗಳಿಂದ ಮುಳುಗಡೆಯ ಬೇನೆಯಲ್ಲಿ ತತರಿಸುತ್ತಿದೆ ಅದಕ್ಕೆ ನಾವು ಹೋದ ವರ್ಷ ಬಹಳ ದೊಡ್ಡದಾದ ಒಂದು ಹೋರಾಟವನ್ನು ಮಾಡಿದ್ದು, ಹಿಂದಿನ ಸರ್ಕಾರ